ಅಸಲು ದಾವಾ ಸಂಖ್ಯೆ . 284 - 2013

ಪಿ.ಡಬ್ಲ್ಯೂ-2
ದಿಃ 24-09-2019
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ನನ್ನ ಸ್ವತಃ ಊರು ಗುಡ್ಡೇಹಳ್ಳಿ ನಾನು 12 ವರ್ಷಗಳ ವರೆಗೂ ದೊಡ್ಡೇರಿಹಳ್ಳಿಯಲ್ಲಿ ಇದೆ . 14 ವರ್ಷಗಳ ನಂತರದಲ್ಲಿ ಗುಡ್ಡೇಹಳ್ಳಿಯಲ್ಲಿ ವಾಸಮಾಡುತ್ತಿದೆ . ವಾದಿಯ ತಂದೆಯ ಹೆಸರು ಶಿವಪ್ಪ . ಶಿವಪ್ಪರವರಿಗೆ 3 ಜನ ಸಹೋದರರು ಅವರು ಹನುಮಂತಪ್ಪ , ಶಿವಪ್ಪ , ಈರಪ್ಪ . ಈರಪ್ಪರವರನ್ನು ಹೊರತುಪಡಿಸಿ ಬೇರೆ ಇಬ್ಬೂ ತೀರಿಕೊಂಡಿರುತ್ತಾರೆ . ಹನುಮಂತಪ್ಪ ರವರಿಗೆ 3 ಗಂಡು 2 ಹೆಣ್ಣು ಮಕ್ಕಳು ಇರುತ್ತಾರೆ . ಅದರಲ್ಲಿ 2 ನೇ ಹೆಣ್ಣು ಮಕ್ಕಳಲ್ಲಿ ಸುಶೀಲಮ್ಮ ರವರು ತೀರಿಕೊಂಡಿರುತ್ತಾರೆ . ಶಿವಪ್ಪನಿಗೆ 5 ಗಂಡು 2 ಹೆಣ್ಣು ಮಕ್ಕಳು . ಇವರ ಪೈಕಿ ಮಲ್ಲಪ್ಪ ಮತ್ತು ಲೋಕೇಶಪ್ಪ ತೀರಿಕೊಂಡಿರುತ್ತಾರೆ .

ವಾದಿಯು ಯಾರು ಯಾರ ಮೇಲೆ ದಾವೆ ಹೂಡಿದ್ದಾರೆ ಎಂದರೆ ಪ್ರತಿವಾದಿ ಮಲ್ಲಪ್ಪರವರ ಮೇಲಷ್ಟೇ ಹೂಡಿರುತ್ತಾರೆ . ಪ್ರಮಾಣ ಪತ್ರದಲ್ಲಿ ಇರುವ ವಿಚಾರ ನನಗೆ ಗೊತ್ತು . ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ . ಸದರಿ ಮಾಹಿತಿಗಳು ನನಗೆ ಸ್ವತಃ ಗೊತ್ತಿರುತ್ತದೆ . ಶಿವಪ್ಪ ಮತ್ತು ವಾದಿಯು ಸೇರಿ ಪ್ರತಿವಾದಿ ಮಲ್ಲಪ್ಪರವರಿಗೆ ಹಣ ಕೊಟ್ಟಿರುತ್ತಾರೆ ಸದರಿ ಸಮಯದಲ್ಲಿ ನಾನು ಅಲ್ಲಿ ಹಾಜರಿದೆ . ದಿನಾಂಕ ನನಗೆ ನಿಖರವಾಗಿ ನೆನಪಿರುವುದಿಲ್ಲ . 1983 ರಲ್ಲಿ ಅವರುಗಳು ವಿಭಾಗ ಆದ 4 ದಿನಗಳ ನಂತರದಲ್ಲಿ ದುಡ್ಡುಕೊಟ್ಟಿರುತ್ತಾರೆ . ವಿಭಾಗ ಮಾಡಿಕೊಂಡಿದಾಗ ನಾನು ಇರಲಿಲ್ಲ ಎಂದರೆ ಸರಿ . ಅವರುಗಳು ಮಾತನಾಡಿಕೊಂಡು ದುಡ್ಡುಕೊಡುವ ಕಾಲಕ್ಕೆ ನಾನು ಇದು ಸಹಿ ಮಾಡಿರುತ್ತೇನೆ . ವಿಭಾಗ ಮಾಡಿಕೊಳ್ಳಲಾದ ಸಮಯದಲ್ಲಿ ನಾನು ಖುದ್ದು ಹಾಜರಿರಲಿಲ್ಲ ನನ್ನ ಮನೆ ಎದುರುಗಡೆ ಮನೆಯಾಗಿದ್ದು ಸದರಿ ವಿಚಾರ ನನಗೆ ತಿಳಿದಿರುತ್ತದೆ . ವಿಭಾಗ ಪತ್ರ ಮಾಡಿಕೊಳ್ಳಲಾಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . ನಾನು ಹಣ ಕೊಟ್ಟ ಸಂಬರ್ಧದಲ್ಲಿ ಇದೇ ಹಾಗೂ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಶಿವಪ್ಪ ರವ ಸಹೋದದರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ . ಶಿವಪ್ಪನ ಮಕ್ಕಳು ಯಾವುದೇ ವಿಭಾಗ ಮಾಡಿಕೊಳ್ಳದೇ ಇದ್ದ ಕಾರಣ ಅವರು ಹಣವನ್ನು ಕೊಟ್ಟಿಲ್ಲಎಂದು ಸೂಚಿಸಿದರೆ ಸರಿಯಲ್ಲ . ವಾದಿ ಮತ್ತು 2 ನೇ ಪ್ರತಿವಾದಿ ಜೊತೆ ಚೆನ್ನಾಗಿ ಇದ್ದೆ ಎಂದರೆ ಸರಿ . ಗುಡ್ಡೆಹಳ್ಳಿಯಲ್ಲಿ ನನ್ನ ಹೆಸರಿಗೆ ನಿವೇಶನ ಮಂಜೂರಾಗಿದೆಯ ಎಂಬ ಪ್ರಶ್ನೆಗೆ ನನ್ನ ತಂದೆ ಹೆಸರಿಗೆ ನಿವೇಶನ ಮಂಜೂರಾಗಿರುತ್ತದೆ ಎಂದು ಹೇಳಿದರು. ವಾದಿ ಮತ್ತು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿ ಜೊತೆ ಚೆನ್ನಾಗಿ ಇರಲಿಲ್ಲ ಎಂದು ಸೂಚಿಸಿದರೆ ಗೊತ್ತಿಲ್ಲ . ವಾದಿ , ಪ್ರತಿವಾದಿಗಳು ಮತ್ತು ನಾನು ಸೇರಿಕೊಂಡು ದುಡ್ಡು

ಕೊಟ್ಟಿರುವುದಾಗಿ ದಾಖಲಾತಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ . 2 ನೇ ವಾದಿ ತಾಲ್ಲೂಕು ಪಂಚಾಯಿತಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ . ಸದರಿಯವರು ನನ್ನ ತಂದೆಯವರಿಗೆ ಮೇಲೆ ಹೇಳಿದ ಆಸ್ತಿಯನ್ನು ಅವರ ಪ್ರಭಾವದ ಮೇರೆಗೆ ಕೊಡಿಸಿದು ಅದಕ್ಕಾಗಿ ನಾನು ಅವರ ಪರವಾಗಿ ಸಾಕ್ಷ್ಯ ಹೇಳುತ್ತಿದ್ದೇನೆ ಎಂದು ಸೂಚಿಸಿದರೆ ಸರಿಯಲ್ಲ . ಸಾಕ್ಷಿ ಸ್ವತಃ ಸದರಿ ಸೈಟ್ ನನ್ನ ತಂದೆಯವರಿಗೆ 1955 ಇಸವಿಯಲ್ಲಿ ಮಂಜೂರಾಗಿರುತ್ತದೆ . ನಾನೇ ಯಾವುದೇ ವಿಚಾರ ಗೊತ್ತಿಲ್ಲದೆ ಇದ್ದರೂ ಸಹ 1 ನೇ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ 2 ನೇ ಪ್ರತಿವಾದಿಯ ಮಾತು ಕಟ್ಟಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ . ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ .

ಮರುವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.